ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

25

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 9/9/2020

# ಸೋಂಕಿನ ತೀವ್ರತೆ ಇಳಿಮುಖ

## 7866 ಹೊಸ ಕೇಸ್ | 146 ಮಂದಿ ಸಾವು

■ **ವಿಕ ಸುದ್ದಿಲೋಕ** ಬೆಂಗಳೂರು 9-9-2020

ರಾಜ್ಯದಲ್ಲಿ ವಾರದಿಂದ 9 ಸಾವಿರ ಸನಿಹ ದಾಖಲಾಗುತ್ತಿದ್ದ ಸೋಂಕಿನ ಪ್ರಮಾಣ ಮಂಗಳವಾರ ಇಳಿಮುಖವಾಗಿದ್ದು, ಹೊಸದಾಗಿ 7,866 ಕೇಸ್ ವರದಿಯಾಗಿದ್ದು, ಸಾವಿನ ಸಂಖ್ಯೆ ಏರಿಕೆಯಾಗಿದೆ.

ಮಂಗಳವಾರ 146 ಸಾವಿನ ಪ್ರಕರಣಗಳು ವರದಿಯಾಗಿವೆ. 7,803 ರೋಗಿಗಳು ಗುಣಮುಖರಾಗಿದ್ದಾರೆ. ಈವರೆಗೆ 4,12,190 ಸೋಂಕು ಪ್ರಕರಣಗಳು ದೃಢಪಟ್ಟಿವೆ. 3,08,573 ಮಂದಿ ಗುಣಮುಖರಾಗಿದ್ದಾರೆ. 96,918 ಸಕ್ರಿಯ ಪ್ರಕರಣಗಳಿದ್ದು, ಒಟ್ಟು 7,866 ಜನ ಮೃತಪಟ್ಟಿದ್ದಾರೆ. ಈವರೆಗೆ ರಾಜ್ಯದಲ್ಲಿ 34.61 ಲಕ್ಷ ಟೆಸ್ಟ್‌ಗಳನ್ನು ಮಾಡಲಾಗಿದೆ.

**ವಿವಿಧೆಡೆ ಸಾವು:** ಬೆಂಗಳೂರಿನಲ್ಲಿ 55, ಮೈಸೂರು 11, ಧಾರವಾಡ 8, ಉಡುಪಿ 7, ಶಿವಮೊಗ್ಗ, ತುಮಕೂರು, ಬಳ್ಳಾರಿ, ಕೊಪ್ಪಳ 6, ಹಾಸನ 5, ಉತ್ತರ ಕನ್ನಡ, ಮಂಡ್ಯ, ಹಾವೇರಿ 4, ದಕ್ಷಿಣ ಕನ್ನಡದಲ್ಲಿ 3 ಸಾವಿನ ಪ್ರಕರಣಗಳು ವರದಿಯಾಗಿವೆ.

## ಹೆಬ್ಬಾರ್‌ಗೆ ಉಸಿರಾಟ ಸಮಸ್ಯೆ



**ಶಿರಸಿ:** ಸೋಂಕು ದೃಢಪಟ್ಟ ಕಾರ್ಮಿಕ ಹಾಗೂ ಸಕ್ಕರೆ ಖಾತೆ ಸಚಿವ ಶಿವರಾಮ್ ಹೆಬ್ಬಾರ್‌ಗೆ ದಿಢೀರ್ ಉಸಿರಾಟ ಸಮಸ್ಯೆ ಕಾಣಿಸಿಕೊಂಡಿದ್ದು, ಬೆಂಗಳೂರಿನ ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂರು ದಿನದ ಹಿಂದೆ ಬೆಂಗಳೂರಿನಿಂದ ಯಲ್ಲಾಪುರಕ್ಕೆ ಬಂದಿದ್ದ ಅವರಿಗೆ ಹಾಗೂ ಪತ್ನಿಗೆ ಸೋಂಕು ಕಾಣಿಸಿಕೊಂಡಿತ್ತು. ಜಿಲ್ಲಾ ಆಸ್ಪತ್ರೆ ವೈದ್ಯರ ತಂಡ ಅವರ ಆರೋಗ್ಯ ತಪಾಸಣೆ ನಡೆಸಿದ ನಂತರ ಹೋಮ್ ಐಸೊಲೇಷನ್‌ಗೆ ಒಳಗಾಗಿದ್ದರು. ಉಸಿರಾಟ ಸಮಸ್ಯೆ ಕಾರಣಕ್ಕೆ ಭಾನುವಾರ ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆದ ನಂತರ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದು ಅವರ ಆಪ್ತರು ತಿಳಿಸಿದ್ದಾರೆ.

## ಶಿವಮೊಗ್ಗ ಶೂನ್ಯವಲ್ಲ

ಶಿವಮೊಗ್ಗದಲ್ಲಿ ಈವರೆಗೆ 10 ಸಾವಿರ ಪ್ರಕರಣ ದಾಖಲಾಗಿದ್ದರೂ ಮಂಗಳವಾರ ರಾಜ್ಯ ಮಾಹಿತಿ ಪಟ್ಟಿಯಲ್ಲಿ ಯಾವುದೇ ಕೇಸ್ ದಾಖಲಾಗಿರುವುದು ಅಚ್ಚರಿಯಾಗಿತ್ತು. ಈ ಬಗ್ಗೆ ತಡ ರಾತ್ರಿ ಸ್ಪಷ್ಟನೆ ನೀಡಿದ ಜಿಲ್ಲಾಡಳಿತವು ತಾಂತ್ರಿಕ ತೊಂದರೆಯಿಂದ ಯಾವುದೇ ಮಾಹಿತಿ ರಾಜ್ಯ ಕೋವಿಡ್ ಕೇಂದ್ರ ತಲುಪಿಲ್ಲ. ಕೊರೊನಾ ಎಂಟು ಜನರನ್ನು ಬಲಿ ಪಡೆದಿದ್ದು, ಸಾವಿನ ಸಂಖ್ಯೆ 174ಕ್ಕೆ ಏರಿಕೆಯಾಗಿದೆ. 359 ಹೊಸ ಪ್ರಕರಣಗಳು ದೃಢಪಟ್ಟಿದೆ ಎಂದು ತಿಳಿಸಿದೆ. ಈ ಮಧ್ಯೆ ಮೆಗ್ಗಾನ್ ಆಸ್ಪತ್ರೆ ಜಿಲ್ಲಾ ಸರ್ಜನ್ ಡಾ.ಆರ್. ರಘುನಂದನ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ರಾಜೇಶ್ ಸುರಗಿಹಳ್ಳಿ ಪಾಸಿಟಿವ್ ಬಂದಿದೆ.